

# ಬಿಗುಮಾನದ ನಡೆಗೆ ಭೂಷಣ

# ಸ್ಟೈಲಿಷ್ ಟೈ

ಉಡುಗೆ ತೊಡುಗೆ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತದೆ. ಆಕರ್ಷಣೀಯ ಹಾವಭಾವಕ್ಕೂ ಅದುವೇ ಭೂಷಣ. ಹಾಗಾಗಿಯೇ ಬಟ್ಟೆ–ಅಲಂಕಾರಕ್ಕೆ ಹೆಚ್ಚಿನ ಮುತುವರ್ಜಿಯನ್ನು ತೆಗೆದುಕೊಳ್ಳುತ್ತೇವೆ. ಬಿಗುಮಾನದ ನಡೆಗೆ ಮೆರುಗು ತುಂಬುವ ಸೂಟು ಬೂಟಿನ ಹಾಗೆಯೇ ಟೈ ಕೂಡ. ಸೂಟಿಗೂ ಸೂಟ್ ಆಗುವ ಫಾರ್ಮಲ್ ಇನ್‌ಶರ್ಟ್‌ಗೂ ಸೈ ಎನ್ನುವ ಟೈ ಸ್ವಾಭಿಮಾನವನ್ನು ಎದೆಯುಬ್ಬಿಸಿ ಹೇಳುತ್ತದೆ.

■ ರಾಘು

ಟೈ (tie) ಅಂದರೆ ಬಂಧಿಸು, ಅಂಟಿಸು, ಗಂಟು ಎನ್ನುವ ಅರ್ಥ ಇದೆ. ಫ್ಯಾಷನ್ ಲೋಕದಲ್ಲಿ ಟೈ ಅಂದರೆ ತೊಟ್ಟ ಅಂಗಿಯ ಕೊರಳಪಟ್ಟಿಗೆ ಕಟ್ಟುವ ಒಂದು ವಸ್ತ್ರ. ಅದು ಉಡುಪಿನ ಗಂಭೀರತೆಯನ್ನು ಹೆಚ್ಚಿಸುತ್ತದೆ ಎನ್ನುತ್ತದೆ ವಸ್ತ್ರವಿನ್ಯಾಸದ ವ್ಯಾಕರಣ. ನಿಘಂಟಿನ ಅರ್ಥದಂತೆ ಟಿಪ್ ಟಾಪ್ ಆಗಿ ಡ್ರೆಸ್ ಮಾಡಿದವರಿಗೆ, ಹೆಚ್ಚುವರಿ ಮೆರುಗನ್ನು ಅಂಟಿಸಿಕೊಳ್ಳುವುದು ಎನ್ನಬಹುದು. ಅಯ್ಯೋ ಟೈ ಕಟ್ಟುವುದು ಸಂಕೀರ್ಣ ಕೆಲಸ. ಅದನ್ನೇ ಗಂಟುಮೂಟೆ ಕಟ್ಟಬೇಕು ಎಂದು ಸರಳವಾದಿಗಳು ದೂರಬಹುದು. ಆದರೆ ಟೈ ಮಾತ್ರ ಅದಕ್ಕೆಲ್ಲ ತಲೆ ಬಿಸಿ ಮಾಡಿಕೊಳ್ಳದೆ ಲೋಲಕದಂತೆ ಕತ್ತಿನಲ್ಲಿ ತನ್ನ ವಯ್ಯಾರವನ್ನು ತೋರಿಸುತ್ತಿದೆ. ಅದು ತನ್ನ ಅನನ್ಯತೆಯನ್ನು ನಾವೀನ್ಯದ ರೂಪದಲ್ಲಿ ಉಳಿಸಿಕೊಳ್ಳುತ್ತಲೇ ಬಂದಿದೆ. ಅದರಲ್ಲೂ ವಿಂಡ್ಸರ್, ಬೌಟೈ, ಕ್ರಾವಟ್, ಬೊಲೊ, ಸ್ಕಿನ್ನಿ ನೆಕ್, ಕಿಪ್ಪರ್ ಟೈ ಹೀಗೆ ಹಲವು ವಿಧಗಳಿವೆ.

ಯೂರೋಪಿನಲ್ಲಿ 17ನೇ ಶತಮಾದಲ್ಲಿ ಮೊದಲ ಬಾರಿಗೆ ಟೈ ಪರಿಚಯ ಆಯಿತು. ಅದನ್ನು ಕಟ್ಟಿ ಚರಿತ್ರೆಯನ್ನು ಬರೆದ ಮಹಾಶಯ 13ನೇ ಲೂಯಿ. ಆತ ಪರಿಚಯಿಸಿದ ನಂತರ ಕ್ರಮೇಣ ಯೂರೋಪಿನಲ್ಲಿ ಪ್ರತಿಷ್ಠಿತರ ಫ್ಯಾಷನ್ ಸೂತ್ರದಲ್ಲಿ ಇದೂ ಒಂದಾಯಿತು. ಕ್ರಮೇಣ ಯೂನಿಫಾರಂ ಧರಿಸುವ ಮಕ್ಕಳಿಂದ ಹಿರಿಯ ನಾಗರಿಕರ ಫಾರ್ಮಲ್ ಉಡುಪಿಗೆ ಸೊಬಗಿನ ಸೂತ್ರವೂ ಇದಾಯಿತು. ಆಧುನಿಕ ಜೀವನಶೈಲಿಯ ಟೈ ಲಿಂಗಭೇದವನ್ನು ಮೀರಿ ಸರ್ವರಲ್ಲೂ ಒಂದಾಗಿದ್ದು ಅದರ ಮತ್ತೊಂದು ಮಜಲು.

ಮಾರುಕಟ್ಟೆಯ ಪ್ರತಿನಿಧಿಗಳು, ಹೋಟೆಲ್‌ಗಳಲ್ಲಿ ಕ್ಯಾಪ್ಟನ್‌ಗಳು, ಉದ್ಯಮಿಗಳು, ಶ್ರೀಮಂತರು, ನ್ಯಾಯಮೂರ್ತಿಗಳು, ಕಟ್ಟುತ್ತಿದ್ದ ಟೈ ಶಾಲಾ ಕಾಲೇಜುಗಳಲ್ಲಿ ಶಿಸ್ತಿನ ರೂಪದಲ್ಲಿ ಸಮವಸ್ತ್ರದ ಭಾಗವಾಯಿತು. ಅದರ ಮುಂದುವರಿದ

